**ಇಂದು ದಿನಾಂಕ:*18.03.2024* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 10 ನೇ ಪ್ರತಿವಾದಿ ಪರ ಶ್ರೀ.ಸಿ.ಟಿ.ಎನ್. ವಕೀಲರಿಂದಃ**

ನಾನು ಶಾಲೆಗೆ ಹೋಗಿಲ್ಲ. ಸರ್ವೆ ನಂ.1/6 ರಲ್ಲಿ 10 ನೇ ಪ್ರತಿವಾದಿಗೆ 19 ಗುಂಟೆ ಮಾರಾಟ ಮಾಡಿದ್ದಾರೆ. 10 ನೇ ಪ್ರತಿವಾದಿಗೆ ಸದರಿ ಜಮೀನನ್ನು 4 ನೇ ಪ್ರತಿವಾದಿ ಮತ್ತು ನನ್ನ ಚಿಕ್ಕಪ್ಪ ಸಣ್ಣಪ್ಪ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪನ ನಡುವೆ ಮಾಯಿ ಮಾತಿನ ವಿಭಾಗ ಆಗಿತ್ತು ಎಂದರೆ ಸರಿ. ವಿಭಾಗ ಸುಮಾರು 20 ವರ್ಷಗಳ ಹಿಂದೆ ಆಗಿದೆ ಎಂದರೆ ಸಾಕ್ಷಿ ವಿಭಾಗ ಆದಾಗ ನಾವು ಚಿಕ್ಕವರು ಇದ್ದೇವು ಎನ್ನುತ್ತಾರೆ. ವಿಭಾಗದ ಪ್ರಕಾರ ಅವರವರು ತಮ್ಮ ತಮ್ಮ ಹಿಸ್ಸೆ ಜಮೀನುಗಳನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನನ್ನ ಚಿಕ್ಕಪ್ಪ ಮತ್ತು ನನ್ನ ತಮ್ಮ ಅವರ ಹಿಸ್ಸೆಯ ಜಮೀನಿನನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ನನಗೆ ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ.

ನಾನು ಸಿದ್ದನಾಯಕನ ಮಗಳು ಎಂದು ತೋರಿಸಲು ದಾಖಲೆ ಕೊಟ್ಟಿದ್ದೀರ ಎಂದರೆ ಸಾಕ್ಷಿ ವಂಶ ವೃಕ್ಷ ಕೊಟ್ಟಿದ್ದೇನೆ. ಅದನ್ನು ಬಿಟ್ಟು ಬೇರೆ ದಾಖಲೆ ಕೊಟಿಲ್ಲ ಎನ್ನುತ್ತಾರೆ. ನಾನು ಸಿದ್ದನಾಯಕನ ಮಗಳು ಎಂದು ನೋಡಿದವರು ಇದ್ದಾರೆ. ನಾನು ಸಿದ್ದನಾಯಕನ ಮಗಳು ಅಲ್ಲ ಎಂದರೆ ಸರಿಯಲ್ಲ. ಆಸ್ತಿ ಹೊಡೆಯಲು ನಾನು ಸಿದ್ದನಾಯಕನ ಮಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಮತ್ತು ನನ್ನ ಚಿಕ್ಕಪ್ಪ ಬ್ಯಾಂಕಿನ ಸಾಲ ತೀರಿಸಲು ಜಮೀನನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಮಾರಾಟ ಆದ ಜಮೀನಿನ ಚೆಕ್ಕುಬಂದಿ ಗೊತ್ತಿಲ್ಲ. ದಾವಾ ಸ್ವತ್ತುಗಳ ದಾಖಲೆಗಳನ್ನು ನನ್ನ ಗಂಡ ಕಂದಾಯ ಕಚೇರಿಯಿಂದ ತಂದಿದ್ದಾರೆ.

ಜಮೀನು ಮಾರಾಟ ಆದ ವಿಚಾರ ನನಗೆ ಸುಮಾರು 5-6 ವರ್ಷಗಳ ಹಿಂದೆ ಗೊತ್ತಾಗಿದೆ. 10 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಕ್ರಯಕ್ಕೆ ಪಡೆದ ಜಮೀನು 10 ನೇ ಪ್ರತಿವಾದಿ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ನಾವು ಸ್ವಾಧೀನ ಇರುವ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ಯಾವ ದಾಖಲೆ ಕೊಟ್ಟಿದ್ದೇನೆ ಹೇಳಲು ಆಗುವುದಿಲ್ಲ. 10 ನೇ ಪ್ರತಿವಾದಿಯೇ ಸ್ವಾಧೀನದಲ್ಲಿ ಇದ್ದರೂ ಸಹಾ ಆತ ಸ್ವಾಧೀನದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ತಾನು ಖರೀದಿ ಮಾಡಿದ ಜಮೀನಿನಲ್ಲಿ ಸ್ವಲ್ಪ ಜಮೀನು ಮಾರಾಟ ಮಾಡಿದ್ದಾರೆ ಮತ್ತು ಆತನ ಹೆಸರಿನಲ್ಲಿ ಈಗ ಮೂರು ಕಾಲು ಗುಂಟೆ ಜಮೀನು ಮಾತ್ರ ಇದೆ ಎನ್ನುವುದು ಗೊತ್ತಿಲ್ಲ. 10 ನೇ ಪ್ರತಿವಾದಿ ಕಡೆಯಿಂದ ಜಮೀನು ಖರೀದಿ ಮಾಡಿದವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವೆ. ಅವರ ಹೆಸರು ಗೊತ್ತಿಲ್ಲ. ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾನೂನು ಬದ್ಧ ಅವಶ್ಯಕತೆಗಾಗಿ 4 ನೇ ಪ್ರತಿವಾದಿ ಮತ್ತು ಸಣ್ಣಪ್ಪ ಜಮೀನನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**